Sl.No.	Name of the Distillery & Address	Name of the Owner
35	Pampasar Distillery Ltd., ISR Compound, Chitwadgi Hospet, Bellary District.	Sri. M.R.Chhabria, Chairman
36	Ravindra 8 Co., Ltd., (Sub-leased in favour of M/s. J.P. Distilleries Ltd., Bangalore, Sy. No.96, Mallick Mirzapur, Bidar.	Sri. J.P. Narayan Swamy Managing Director
37	SLN Distilleries (P) Ltd., Sy. No.459/1, 459/5 Gadag, Dharwad	Sri. J.P. Narayan Swamy Managing Director
38	Samsone Distilleries (P) Ltd., Sy. No.233, Duggavathi Village Harapanahalli Taluk, Davangere District	Sri. S.S. Bakkesh. Director
39	The Ugar Sugar Works Ltd., Ugarkhurd, Belgaum District	Sri. S.S. Shiragaonkar, Managing Director

ತುಂಗಾ ಮೇಲ್ದಂಡೆ ಯೋಜನೆ.

2346(2613) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಂಗಾ ಮೇಲ್ದಂಡೆ ಯೋಜನೆಗೆ ರಾಜ್ಯ ಸರ್ಕಾರ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದಯೇ ನೀಡಿದ್ದರೆ, ಯೋಜನೆಗೆ ಮಾಡಿರುವ ಅಂದಾಜುವೆಚ್ಚ ಎಷ್ಟು ಮತ್ತು ಯೋಜನೆಗೆ ಈವರೆಗೆ ಖರ್ಚಾದ ಹಣವೆಷ್ಟು? ಹಾಗೂ ಈ ಯೋಜನೆಯಿಂದ ಎಷ್ಟು ಎಕರೆಗೆ ನೀರು ಒದಗಿಸುವ ಯೋಜನೆ ಇದೆ;

ಆ) ಈ ಯೋಜನೆಗೆ 1998ನೇ ಸಾಲಿನಿಂದ 2001ರ ವರೆಗೆ ಆದ ವೆಚ್ಚಗಳೆಷ್ಟು?

ಇ) ಈ ಯೋಜನೆಯಿಂದ ಎಷ್ಟು ಎಕರೆ ಪ್ರದೇಶ ನೀರಾವರಿಯಾಗಲಿದೆ? ಮತ್ತು ಇದಕ್ಕೆ ಎಷ್ಟು ಟಿಎಂಸಿ ನೀರು ಬೇಕಾಗುತ್ತದೆ.

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) ತುಂಗಾ ಮೇಲ್ದಂಡೆ ಯೋಜನೆಯ ರೂ.271.41 ಕೋಟಿಗಳ (1988-89ರ ದರಗಳಂತೆ) ಅಂದಾಜಿಗೆ ಸರ್ಕಾರ ಅನುಮೋದನೆ ನೀಡಿದೆ. ಇತ್ತೀಚೆಗೆ ಈ ಯೋಜನೆಯ ಪರಿಷ್ಕೃತ ಅಂದಾಜು ರೂ.915.35 ಕೋಟಿಗೆ ಮಾಡಲಾಗಿದೆ.

ಈ ಯೋಜನೆಯಡಿ ಜೂನ್ 2001 ವರೆಗೆ ಒಟ್ಟು 111.17 ಕೋಟಿಗಳು ಹಣ ಖರ್ಚು ಮಾಡಲಾಗಿದೆ. ಈ ಯೋಜನೆಯಿಂದ 1,98,900 ಎಕರೆ ನಿವ್ವಳ ಪ್ರದೇಶಕ್ಕೆ ನೀರು ಒದಗಿಸಲು ಯೋಜಿಸಲಾಗಿದೆ.

ಆ) ಈ ಯೋಜನೆಯಡಿ ಜೂನ್ 2001 ವರೆಗೆ ಒಟ್ಟು ರೂ.111.17 ಕೋಟಿಗಳಷ್ಟು ಹಣ ವೆಚ್ಚ ಮಾಡಲಾಗಿದೆ. ವರ್ಷವಾರು ವಿವರ ಈ ಕೆಳಗಿನಂತಿದೆ;

ಮಾರ್ಚ್ 97 ರವರೆಗೆ	-	16.12	ಕೋಟಿಗಳು
1997-98	-	10.34	ಕೋಟಿಗಳು
1998-99	-	4.05	"
1999-2000	-	10.82	"
2000-2001	-	49.36	"
2001-2002	-	20.48	"
ಜೂನ್ 2001ರವರೆಗೆ	-		
	-	111.17	ಕೋಟಿಗಳು

ಇ) ಈ ಯೋಜನೆಯಿಂದ 1,98, 900 ಎಕರೆ ನಿವ್ವಳ ಪ್ರದೇಶಕ್ಕೆ ನೀರಾವರಿ ಒದಗಿಸಲು ಉದ್ದೇಶಿಸಲಾಗಿದೆ ಮತ್ತು ಇದಕ್ಕೆ 12.24 ಟಿ.ಎಂ.ಸಿ. ನೀರು ಬೇಕಾಗುತ್ತದೆ.

It is proposed to irrigate 1,98,900 acres of net area, under this project and the quantity of water required is 12.24 tmc.

ಚೆನ್ನರಾಯ ಪಟ್ಟಣ ತಾಲ್ಲೂಕ ದಂಡಿಗನಹಳ್ಳಿ ಗ್ರಾಮದ ಶರಾಬು ಅಂಗಡಿ ಮುಚ್ಚುವುದು.

2347(2815) ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ದಂಡಿಗನಹಳ್ಳಿ ಗ್ರಾಮದ ಮೂರು ಸ್ತ್ರಿಶಕ್ತಿ ಸಂಘಟನೆಗಳು ಈ ಗ್ರಾಮದಲ್ಲಿರುವ ಶರಾಬು ಅಂಗಡಿ ನಡೆಸಲು ಕೊಟ್ಟಿರುವ ಲೈಸೆನ್ಸನ್ನು ರದ್ದುಪಡಿಸುವಂತೆ ಕಳೆದ 3 ತಿಂಗಳಿಂದ ಚಳುವಳಿ ನಡೆಸುತ್ತಿರುವುದು ನಿಜವಲ್ಲವೆ?